## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. ಸಂಖ್ಯೆ: 927/2025

ಪ್ರಾಸಾ – 8

**ಸಾಕ್ಷಿಯು ದಿಃ 20.05.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಡಾಃ ಮಂಜುನಾಥ |
| ತಂದೆಯ ಹೆಸರು | : | ಎಸ್. ಗಂಗಯ್ಯ |
| ವಯಸ್ಸು | : | 59 ವರ್ಷ |
| ವೃತ್ತಿ | : | ಆಡಳಿತ ವೈದ್ಯಾಧಿಕಾರಿ |
| ವಾಸಸ್ಥಳ | : | ಗುಂಡ್ಲುಪೇಟೆ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಡಿಸೆಂಬರ್ 2015 ಇಲ್ಲಿಯವರೆಗೆ ಗುಂಡ್ಲುಪೇಟೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಮತ್ತು ಕಳೆದ 5 ವರ್ಷಗಳಿಂದ ಆಡಳಿತ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಚಾಸಾ 7 ಡಾಃ ನಾಗರಾಜಚಾರಿ ರವರು ನಮ್ಮ ಆಸ್ಪತ್ರೆಯಲ್ಲಿ 2013 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, 2022 ನೇ ಇಸವಿಯಲ್ಲಿ ಮೃತಪಟ್ಟಿರುತ್ತಾರೆ. ಚಾಸಾ 7 ರವರು ನನಗೆ ಗೊತ್ತು ಮತ್ತು ನಾವುಗಳು ಒಟ್ಟಿಗೆ ಗುಂಡ್ಲುಪೇಟೆ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಅವರ ಬರವಣಿಗೆ ಮತ್ತು ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ ಹಾಗೂ ಅವರ ಚಿಕಿತ್ಸೆಯ ವರದಿಗಳನ್ನು ನೋಡಿದರೆ ಆ ಬಗ್ಗೆ ಹೇಳುತ್ತೇನೆ.

3. ದಿಃ 15.01.2021 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ 2 ರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಚಾಸಾ 7 ರವರು ಪರೀಕ್ಷಿಸಿ ಚಿಕಿತ್ಸೆ ನೀಡಿರುತ್ತಾರೆ ಮತ್ತು ಅವರಿಗೆ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ ಎಂದು ವರದಿ ನೀಡಿರುತ್ತಾರೆ.

a. ಎಡ ಮಂಡಿಯ ಒಳಭಾಗದಲ್ಲಿ ಮುಟ್ಟಿದರೆ ನೋವಿನ ಅನುಭವದ ಗಾಯ ಉಂಟಾಗಿರುವುದಾಗಿ ನಮೂದಿಸಿರುತ್ತಾರೆ.

4. ಮೇಲ್ಕಂಡ ಗಾಯವು ಸಾಮಾನ್ಯ ಸ್ವರೂಪದ್ದು ಎಂದು ಚಾಸಾ 7 ರವರು ನಿಪಿ 6 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ ಎಂದು ಸಾಕ್ಷಿಯು ನಿಪಿ 6 ರಲ್ಲಿ ಚಾಸಾ 7 ರವರ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 6(ಬಿ) ಎಂದು ಗುರ್ತಿಸಲಾಯಿತು. ಮುದ್ದೆ ಮಾಲು 1 ರಿಂದ ಹಲ್ಲೆ ಮಾಡಿದರೆ ಸದರಿ ಗಾಯವು ಉಂಟಾಗುವ ಸಾಧ್ಯತೆ ಇದೆ. ನಿಪಿ 6 ರಲ್ಲಿ ಬರೆದಿರುವ ಬರವಣಿಗೆಗಳು ಚಾಸಾ 7 ರವರಿಗೆ ಸಂಬಂಧಿಸಿದ್ದಾಗಿರುತ್ತದೆ.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ**

ಒಬ್ಬ ವ್ಯಕ್ತಿ ಓಡುವಾಗ ಮಖಾಡೆ ಬಿದ್ದರು ಸಹ ನಿಪಿ 6 ರಲ್ಲಿ ನಮೂದಿಸಿರುವ ಗಾಯ ಉಂಟಾಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 7 ರವರು ಚಾಸಾ 2 ರವರಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಅನುಕೂಲವಾಗುವ ರೀತಿಯಲ್ಲಿ ನಿಪಿ 6 ಗಾಯದ ಪ್ರಮಾಣ ಪತ್ರವನ್ನು ಚಾಸಾ 7 ರವರು ನೀಡಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ